ಇರಬಹುದೇನೋ ಎಂದು ನೋಡಿದರೆ ಬೆಳಗ್ಗೆಯೇ ಶೇಷು ಮಾಡಿದ್ದ. ನಾನು ಸ್ವಲ್ಪ ಅಸಹನೆಯಿಂದಲೇ, ''ಏನಪ್ಪ ಶೇಷು, ಬೆಳಗ್ಗೆನೇ...'' ಎಂದೆ. ''ಸಾರ್ ತುಂಬಾ ಮುಖ್ಯವಾದ ವಿಷ್ಯ, ಒಂದ್ವೇಳೆ ಹಾವು ಸಿಕ್ಕಿದ ಕೂಡ್ಲೇ, ಅದನ್ನ ಬರೀ ಕೈಯಲ್ಲಿ ಮುಟ್ಟೋದು ಬೇಡ, ಗ್ಲೌಸ್ ಹಾಕ್ಕೊಂಡು ಅದನ್ನ ಹಿಡ್ಕೊಬೇಕು. ಆ ಹಾವು ತುಂಬ ಸೂಕ್ಷ್ಮ ಸಾರ್, ಬರೀ ಕೈ ಶಾಖಕ್ಕೆ ಅದರ ತೂಕ ಕಡಿಮೆ ಆಗೋಗುತ್ತಂತೆ. ಅಷ್ಟೇ ಅಲ್ಲ, ಅದು ಸಿಕ್ಕಿದ ಕೂಡ್ಲೇ ಅದನ್ನ ತೂಕ ಹಾಕಿ, ಒಂದು ಸೂಟ್‌ಕೇಸಲ್ಲಿ ಹಾಕಿಡಕ್ಕೆ ಹೇಳಿ, ಅದು ಎಷ್ಟೇ ನಿರುಪದ್ರವಿ ಜೀವಿ ಆಗಿದ್ರೂ ಚೀಲದಲ್ಲಿ ಹಾಕಿಟ್ರೆ ಆ ಹಾವು ತನ್ನ ಮೂತೀಲೇ ಎಂಥ ಚೀಲನಾದ್ರೂ ಕೊರೆದು ತೂತು ಮಾಡಿ ಓಡೋಗುತ್ತಂತೆ...'' ನಾನು ಇದನ್ನು ಪ್ರಪಂಚದ ಎಂಟನೇ ಅದ್ಭುತವೆಂಬಂತೆ ಕೇಳಿಸಿಕೊಳ್ಳತೊಡಗಿದೆ. ಮತ್ತೆ ಮಾತು ಮುಂದುವರೆಸಿದ ಅವನು, ''ಇನ್ನೊಂದು ವಿಚಾರ... ಹಾವು ಕೊನೇ ಪಕ್ಷ ಮೂರೂವರೆ ಕೇಜಿ ತೂಕ ಬರಬೇಕು, ಇಲ್ಲ ಅಂದ್ರೆ ಬೈಯರ್ಸ್ ಇಂಟ್ರಸ್ಟ್ ತೋರಿಸಲ್ಲ'' ಎಂದು ಹೊಸ ಬಾಂಬ್ ಹಾಕಿದ! ಅದು ಕೊಂಚ ಶಕ್ತಿಶಾಲಿಯಾದ ಬಾಂಬ್ ಆಗಿತ್ತು.

**ನನ್ನ ಅದೃಷ್ಟ ದೇವತೆ ಡಬಲ್ ಎಂಜಿನ್ ಹಾವಿದ್ದ ಹಳ್ಳಿಗೆ ಕಾಲಿರಿಸಿದೆ. ಅದು ಹೇಗಿರಬಹುದು? ಆ ಹಾವಿನ ಸ್ವಭಾವ ಹೇಗೆ? ಅದು ಕೇವಲ ಮಣ್ಣನ್ನೇ ತಿಂದು ಬೆಳೆಯುವುದು ನಿಜವೇ? ಹೀಗೆ ನನ್ನ ಮನಸ್ಸಿನ ತುಂಬಾ ಆ ಹಾವೇ ತುಂಬಿಕೊಂಡಿತ್ತು.**

ನಾನು ಗಾಬರಿಯಿಂದ, ''ಅಲ್ಲಯ್ಯ ನೀನು ಇದನ್ನೆಲ್ಲ ಮೊದಲು ನಂಗೆ ಹೇಳಿರಲೇ ಇಲ್ಲ'' ಎಂದು ರಾಗ ಎಳೆದೆ. ''ಸ್ಪೆಷಲ್ ಇನ್‌ಸ್ಟ್ರಕ್ಷನ್ಸ್ ಅಂತ ಅವ್ರು ನಂಗೂ ಈವಾಗಲೇ ಹೇಳಿದ್ರು ಸಾರ್'' ಎಂದ ನಯವಾಗಿ ತಪ್ಪಿಸಿಕೊಂಡ. ''ಒಂದ್ವೇಳೆ, ಮೂರೂವರೆ ಕೇಜಿಗಿಂತ ಜಾಸ್ತಿ ಇದ್ರೆ ಏನು ಕತೆ?'' ಎನ್ನಲು, ಉತ್ಸಾಹಿತನಾಗಿ ''ಜಾಕ್‌ಪಾಟ್ ಮೇಲೆ ಜಾಕ್‌ಪಾಟ್ ಹೊಡೀತು ಅಂದ್ಕೊಳಿ ಸಾರ್, ಮೂರೂವರೆ ಕೇಜಿ ಮೇಲೆ ಪ್ರತಿ ನೂರು ಗ್ರಾಮ್‌ಗೆ ಇಪ್ಪತ್ತು ಲಕ್ಷ ಎಕ್ಸ್‌ಟ್ರಾ ಕೊಡ್ತಾರಂತೆ'' ಎಂದು ನನ್ನನ್ನು ದಂಗು ಬಡಿಸಿದ. ಅದನ್ನು ಕೇಳುತ್ತಿದ್ದಂತೆ ನನಗೂ ಹೊಸ ಕನಸಿನಲೋಕವೊಂದು ಕಾಣತೊಡಗಿತು. ಶೇಷು ಏನು ಹೇಳಿದನೋ ಯಥಾವತ್ತಾಗಿ ಎಲ್ಲವನ್ನೂ ನಮ್ಮ ಭಾವನಿಗೆ ಹೇಳಿ ಅದು ಆತನ ತಮ್ಮನ ಕಿವಿಗೆ ತಲುಪುವಂತೆ ಮಾಡಿದೆ.

ಮುಂದಿನ ಎರಡು ದಿನ, ಇದೆಲ್ಲ ನಿಜವೇ, ಇಷ್ಟು ಸುಲಭವಾಗಿ ದುಡ್ಡು ಸಿಗುವುದು ಸಾಧ್ಯವೇ? ಇದು ಭ್ರಮೆಯೋ ನಿಜವೋ ಎಂಬ ಗೊಂದಲದಲ್ಲಿರುವಾಗ ನಮ್ಮ ಭಾವನಿಂದ ಫೋನ್ ಬಂತು. ಆ ಬದಿಯಿಂದ ಉದ್ವೇಗದಿಂದ ಆತ, ''ಭಾವ, ಹಾವು ಸಿಕ್ಕಿ ಬಿಡ್ತಂತೆ...'' ಎಂದ. ಮೈ ಜುಮ್ ಎನಿಸಿತು. ಒಂದು ಕ್ಷಣ ನನ್ನಿಂದ ಪ್ರತಿಕ್ರಿಯೆ ಬಾರದಿದ್ದುದು ನೋಡಿ ಆತ ಮತ್ತೊಮ್ಮೆ, ''ಗ್ಲೌಸ್ ಸಿಗಲಿಲ್ಲ ಅಂತ ಅಂತ ಅವ್ನು ಕೈಗೆ ಪ್ಲಾಸ್ಟಿಕ್ ಕವರ್ ಹಾಕ್ಕೊಂಡು ಹಾವು ಹಿಡಿದ್ನಂತೆ, ಆ ಹಳ್ಳೀಲಿ ಅಂಗಡಿ ಇಲ್ಲ, ಮನೇಲೂ ಸೂಟ್‌ಕೇಸ್ ಇಲ್ಲ, ಅದಕ್ಕೆ ಅವನು ಮೂರು ಚೀಲ ತಗೊಂಡು ಒಂದರೊಳಗೆ ಇನ್ನೊಂದು ಹಾಕಿ ಭದ್ರವಾಗಿ ಹಾವನ್ನ ಹಿಡಿದುಹಾಕಿದಾನೆ...